ಬಂದು ಅವನ ಪಕ್ಕ ನಿಂತಿದ್ದಳು. ಅವನು ಮಲಗಿದ ಮಗುವನ್ನು ಹಗುರಾಗಿ ಅವಳಿಂದ ಎತ್ತಿಕೊಂಡು ತನ್ನ ಭುಜದ ಮೇಲೆ ಒರಗಿಸಿಕೊಂಡ. ದಿನವಿಡೀ ಅವರು ಊರಿನ ಬೀದಿಯಲ್ಲಿ ನಡೆಯುತ್ತಲೇ ಇದ್ದರು.

ಅದು ಅವರಿಬ್ಬರ ತುಂಬು ಯೌವನದ ದಿನಗಳು. ಅವರಿಗೆ ಬಿಸಿಲೇನು, ಮಳೆಯೇನು? ಒಮ್ಮೆ ಚಹಾ ಕುಡಿಯಲೆಂದು ಒಂದು ಕೆಫೆಯ ಒಳಹೊಕ್ಕಾಗ ಒಬ್ಬ ಗಂಡು, ಒಂದು ಹೆಣ್ಣಿನ ಜೊತೆ ಒಂದು ಮಗುವನ್ನು ನೋಡಿ ಒಂದು ಮೂಲೆಯ ಕುರ್ಚಿಗಳನ್ನು ಒರೆಸಿ ಕೂತುಕೊಳ್ಳಲು ಚೊಕ್ಕಮಾಡಿಕೊಟ್ಟಿದ್ದ ಮಾಣಿ. ಮತ್ತು ಆ ಮೂಲೆಯಲ್ಲಿ ಅವರ ಕನಸಿನ ಮನೆ ನಿರ್ಮಿತಗೊಂಡಿತ್ತು ಆ ಕ್ಷಣ.

ಮತ್ತೊಮ್ಮೆ... ಓಡುತ್ತಿರುವ ರೈಲಿನಲ್ಲಿ ಅವರಿಬ್ಬರೂ ಆಕಸ್ಮಿಕವಾಗಿ ಭೇಟಿಯಾದರು. ಅವನ ಜೊತೆಗೆ ಅಮ್ಮನೂ ಇದ್ದಳು. ಜೊತೆಗೊಬ್ಬ ಗೆಳೆಯನೂ. ಅವಳ ಸೀಟು ಬಹಳ ದೂರದಲ್ಲಿತ್ತು. ಅವನ ಗೆಳೆಯ ತನ್ನ ಸೀಟನ್ನು ಅವಳಿಗೆ ಬಿಟ್ಟುಕೊಟ್ಟು ಅವಳ ಸೂಟ್‌ಕೇಸನ್ನು ಅವನ ಸೂಟ್‌ಕೇಸಿನ ಪಕ್ಕವೇ ತಂದಿಟ್ಟ. ಗಾಡಿಯಲ್ಲಿ ಹಗಲು ಚಳಿಯಿರಲಿಲ್ಲ. ರಾತ್ರಿ ತುಂಬಾ ಚಳಿಯಿತ್ತು. ಅಮ್ಮ ಇಬ್ಬರಿಗೂ ಒಂದು ಕಂಬಳಿ ಕೊಟ್ಟಳು. ಅರ್ಧ ಅವನಿಗೆ ಇನ್ನರ್ಧ ಅವಳಿಗೆ. ಓಡುತ್ತಿರುವ ಗಾಡಿಯಲ್ಲಿ ಅವರು ಹಂಚಿಕೊಂಡ ಕಂಬಳಿಯ ಅಂಚುಗಳು ಗೋಡೆಗಳಾಗಿ ಅವರ ಕನಸಿನ ಮನೆ ನಿರ್ಮಿತವಾಗಿತ್ತು.

ಹೀಗೆ ಮೋಹದ ಗೋಡೆ ಏಳುತ್ತಿದ್ದವು, ಉರುಳುತ್ತಿದ್ದವು. ಕೊನೆಗೆ ಅವರಿಬ್ಬರ ನಡುವೆ ಹಾಳುಕೊಂಪೆಯಂಥ ಮೌನದ ಗುಡ್ಡೆ ರಾಶಿಬಿದ್ದಿರುತ್ತಿತ್ತು. ಅವನಿಗೆ ಯಾವ ಬಂಧನವೂ ಇದ್ದಿಲ್ಲ. ಅವಳಿಗಿತ್ತು. ಅವಳು ಕಳಚಿಕೊಳ್ಳಬಹುದಿತ್ತು. ಆದರೇನು... ಅವರಿಬ್ಬರೂ ಜೀವನ ಪರ್ಯಂತ ಬೀದಿಗಳಲ್ಲಿ ನಡೆಯುತ್ತಲೇ ಉಳಿದರು.

ಈಗ ಆಯುಷ್ಯವೇ ಕಳೆದಿದೆ. ಅವಳು ತನ್ನ ಆಯುಷ್ಯದ ಸುಡುವ ದಿನಗಳನ್ನೂ ಮತ್ತು ತಣ್ಣಗಿನ ದಿನಗಳನ್ನೂ ನೆನೆದಳು. ಎಲ್ಲಾ ದಿನಗಳು, ಎಲ್ಲಾ ವರುಷಗಳು ಅವಳಿಗೆ ತಾಳೆ ಮರದ ಎಲೆಗಳಂತೆ ಗಾಳಿಯಲ್ಲಿ ಕಂಪಿಸುತ್ತಿರುವಂತೆ ಅನಿಸಿತು.

ಬಹಳ ಹಿಂದಿನ ಮಾತು. ಅವಳು ವರುಷಗಳ ಮೌನವನ್ನು ಮುರಿದು ಕೇಳಿದ್ದಳು. 'ನೀನೇಕೆ ಮಾತಾಡುವುದಿಲ್ಲ? ಏನನ್ನೂ ಹೇಳುವುದಿಲ್ಲ. ಏನಾದರೂ ಹೇಳು' ಅವನು ನಕ್ಕುಬಿಟ್ಟಿದ್ದ. 'ಇಲ್ಲಿ ತುಂಬಾ ಬೆಳಕಿದೆ. ಎಲ್ಲೆಡೆಗೂ ಪ್ರಖರವಾದ ಬೆಳಕಿದೆ. ನನಗೆ ಮಾತನಾಡಲಾಗದು..!'

ಸೂರ್ಯನನ್ನು ಹಿಡಿದು ನಂದಿಸಿಬಿಡುವಷ್ಟು ಅವಳಿಗೆ ಉರಿದುಹೋಯ್ತು.

ಬೀದಿಗಳಲ್ಲಿ ಬರೀ ಹಗಲಿರುತ್ತದೆ. ರಾತ್ರಿಯಂತೂ ಮನೆಗಳಲ್ಲಿರುತ್ತದೆ. ಆದರೆ ಅವರಿಗೆ ಮನೆಯಂತೂ ಇರಲಿಲ್ಲ. ಹೀಗಾಗಿ ರಾತ್ರಿಯೂ ಇದ್ದಿಲ್ಲ. ಅವರ ಪಾಲಿಗೆ ಕೇವಲ ಬೀದಿಗಳಿದ್ದವು, ಸೂರ್ಯನಿದ್ದ. ಆದರೆ ಅವನು ಸೂರ್ಯನ ಬೆಳಕಿನಲ್ಲಿ ಮಾತಾಡಲಾರ!!

ಒಮ್ಮೆ ಅವನು ಬಾಯಿತೆರೆದಿದ್ದ.

ಹೀಗೆಯೇ ಅವನು ಮೌನವಾಗಿ ಕುಳಿತಿದ್ದಾಗ ಅವಳು ಕೇಳಿದ್ದಳು 'ಏನು ಯೋಚಿಸುತ್ತಿದ್ದಿ?'

'ಹುಡುಗಿಯರೊಂದಿಗೆ ಫ್ಲರ್ಟ್ ಮಾಡಬೇಕು, ನಿನ್ನನ್ನು ನೋಯಿಸಬೇಕು' ಅಂತಾ ಯೋಚಿಸ್ತಿದೀನಿ ಎಂದಿದ್ದ.

ಒಂದುವೇಳೆ ಇದೇ ನಿಜವಾಗಿದ್ದರೆ, ಅವಳು ಇಷ್ಟು ದುಃಖಿತಳಾಗುತ್ತಿದ್ದಿಲ್ಲ, ಪರಮ ಸುಖಿಯಾಗಿರುತ್ತಿದ್ದಳು. ಅದನ್ನೇ ನೆನೆದು ಅವಳು ಬಿದ್ದು ಬಿದ್ದು ನಕ್ಕಿದ್ದಳು. ಅವನೂ ನಕ್ಕಿದ್ದ.

ಆಮೇಲೆ ಮತ್ತೊಂದು ದೀರ್ಘ ಮೌನ.

ಅನೇಕ ಬಾರಿ ಅವಳಿಗೆ ಅನಿಸಿದ್ದಿದೆ- ಅವನ ಮೌನದೊಳಗೆ ಕೈ ಚಾಚಿ ಅವನನ್ನು ಈಚೆಗೆ ಎಳೆದುಕೊಳ್ಳಬೇಕೆಂದು. ಎಲ್ಲಿವರೆಗೆಂದರೆ ಹೃದಯದ ನೋವು ಬಿರಿದು ಮನಸ್ಸು ಆರ್ದ್ರವಾಗುವವರೆಗೂ. ಆದರೆ ಅವಳು ಅಸಹಾಯಕಳಂತೆ ತನ್ನ ಕೈಗಳನ್ನೇ ಶೂನ್ಯ ನೋಟದಿಂದ ದಿಟ್ಟಿಸುತ್ತಿದ್ದಳು. ಯಾವತ್ತೂ ಆ ಕೈಗಳಿಗೆ ಏನನ್ನೂ ಹೇಳಲಿಲ್ಲ ಆಕೆ....

ಒಮ್ಮೆ ಅವನು ಅಂದಿದ್ದ –'ನಡೆ ಚೀನಾ ದೇಶಕ್ಕೆ ಹೋಗೋಣ' 'ಚೀನಾ' 'ಹೋಗೋಣ, ಮರಳಿ ಬರುವುದು ಬೇಡ.

'ಆದರೆ ಚೀನಾ ಯಾಕೆ'

ಈ 'ಯಾಕೆ' ಅನ್ನುವುದು ಬಹುಶಃ ಆ ತಾಳೆ ಮರದಂತೆಯೇ ಇತ್ತು. ಅದರ ಎಲೆಗಳು ಗಾಳಿಯಲ್ಲಿ